**ಕರ್ನಾಟಕ ಸರ್ಕಾರ**

ಸಂಖ್ಯೆ:ಹಿಂವಕಇ/ಡಿಬಿಟಿ/ಸಿಆರ್-12/2013-14

ಆಯುಕ್ತರ ಕಛೇರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ನಂ.16-ಡಿ, 3ನೇ ಮಹಡಿ, ದೇವರಾಜ ಅರಸು ಭವನ,
ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು-52, ದಿನಾಂಕ: 12.02.2014

## ಡಿ.ಬಿ.ಟಿ ಸುತ್ತೋಲೆ-7

ವಿಷಯ : **ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ಸಹಾಯ ಹಾಗೂ ಮೆಟ್ರಿಕ್-ನಂತರದ ಅರ್ಹತಾ ವಿದ್ಯಾರ್ಥಿವೇತನ ಸೌಲಭ್ಯಗಳನ್ನು ಇ-ಪಾಸ್ ವ್ಯವಸ್ಥೆಯ ಮೂಲಕ ಮಂಜೂರು ಮಾಡುವ ಕುರಿತು.**

ಉಲ್ಲೇಖ:
1. ಈ ಕಛೇರಿಯ ಆದೇಶ ಸಂ.ಹಿಂವಕಇ/ಅಮಾಜ/ಸಿಆರ್-135/2013-14, ದಿನಾಂಕ 5.2.2014.
2. ಈ ಕಛೇರಿಯ ಆದೇಶ ಸಂ.ಹಿಂವಕನಿ/ಅಮಾಜ-1/ಸಿಆರ್-07/2013-14, ದಿನಾಂಕ 6.2.2014.

******

1. ಅಲೆಮಾರಿ/ಅರೆ ಅಲೆಮಾರಿ ಮೆಟ್ರಿಕ್-ನಂತರದ ವಿದ್ಯಾರ್ಥಿಗಳಿಗೆ ಈ ಮೇಲಿನ ಸೌಲಭ್ಯಗಳನ್ನು ಮಂಜೂರು ಮಾಡಲು ಅನುಕ್ರಮವಾಗಿ ಉಲೇಖ (1) ಮತ್ತು ಉಲ್ಲೇಖ (2)ರ ಆದೇಶಗಳಲ್ಲಿ ಜಿಲ್ಲೆಗಳಿಗೆ ಅನುದಾನವನ್ನು ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಇವರ ವಶಕ್ಕೆ ಬಿಡುಗಡೆ ಮಾಡಲಾಗಿರುತ್ತದೆ.

2. ಈಗಾಗಲೇ ಡಿ.ಬಿ.ಟಿ-ಸುತ್ತೋಲೆ-1 ರಿಂದ 6 ರವರೆಗಿನ ಡಿ.ಬಿ.ಟಿ ಸುತ್ತೋಲೆಗಳಲ್ಲಿ ನೀಡಿರುವ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು, ಈ ಎರಡೂ ಸೌಲಭ್ಯಗಳನ್ನು ಮಂಜೂರು ಮಾಡುವಂತೆ ಕೂಡಲೇ ನಿಮ್ಮ ಅಧೀನದಲ್ಲಿ ಬರುವ ಎಲ್ಲಾ ತಾಲ್ಲೂಕು ವಿಸ್ತರಣಾಧಿಕಾರಿಗಳಿಗೆ ಸೂಚನೆ ನೀಡುವಂತೆ ತಿಳಿಸಿದೆ.

3. ಊಟ ಮತ್ತು ವಸತಿ ಸಹಾಯ ಸೌಲಭ್ಯವನ್ನು ಮಂಜೂರು ಮಾಡುವ ಪೂರ್ವದಲ್ಲಿ ಮಂಜೂರಾತಿ ಪ್ರಾಧಿಕಾರ/ಡಿ.ಡಿ.ಓ ಆಗಿರುವ ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು ಈ ಯೋಜನೆಯ ಸೌಲಭ್ಯಕ್ಕೆ ಇ-ಪಾಸ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲಾಗುವ ಪಟ್ಟಿಯಲ್ಲಿನ ವಿದ್ಯಾರ್ಥಿಗಳು ಸರ್ಕಾರಿ/ಅನುದಾನಿತ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳ ನಿಲಯಾರ್ಥಿಗಳಾಗಿರುವುದಿಲ್ಲವೆಂದು ಖಚಿತಪಡಿಸಿಕೊಳ್ಳುವುದು. ಒಂದು ವೇಳೆ, ಈ ಸೌಲಭ್ಯಕ್ಕ ಅರ್ಹರ ಪಟ್ಟಿಯಲ್ಲಿ ಯಾವುದಾದರೂ ವಿದ್ಯಾರ್ಥಿಯು ನಿಲಯಾರ್ಥಿ ಆಗಿರುವುದು ಕಂಡುಬಂದಲ್ಲಿ, ಅಂತಹ ಪ್ರಕರಣಗಳ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಗಮನಕ್ಕೆ ತಂದು, ಅಂತಹ ಪ್ರಕರಣಗಳನ್ನು ತಿರಸ್ಕರಿಸುವ ಕ್ರಮ ಕೈಗೊಳ್ಳುವುದು.

4. ವಿದ್ಯಾರ್ಥಿಗಳು ಬ್ಯಾಂಕಿನಲ್ಲಿ ಜಂಟಿ ಖಾತೆ ಹೊಂದಿರುವಂತಹ ಪ್ರಕರಣಗಳಿಗೆ ಸಂಬಂಧಿಸಿದ ವಿದ್ಯಾರ್ಥಿಗಳನ್ನು ಡಿ.ಬಿ.ಟಿ ವ್ಯವಸ್ಥೆ ಮೂಲಕ ಮಂಜೂರು ಮಾಡಲು ಪರಿಗಣಿಸದಿರುವಂತೆ ತಿಳಿಸಿದೆ.

5. ಈ ಎರಡೂ ಯೋಜನೆಗಳ ಸೌಲಭ್ಯಗಳನ್ನು ಸರ್ಕಾರದ ಆದೇಶದಲ್ಲಿರುವ ನಿಬಂಧನೆಗಳಿಗೆ ಒಳಪಟ್ಟು ಮಂಜೂರು ಮಾಡುವಲ್ಲಿ ಕೆಳಕಂಡ ಸೂಚನೆಗಳನ್ನು ಅನುಸರಿಸಲು ಸೂಚಿಸಿದೆ.

(ಅ) ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ತಕ್ಷಣವೇ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ಕಾರ್ಯಕ್ರಮದಡಿ, ಊಟ ಮತ್ತು ವಸತಿ ಸಹಾಯ ಯೋಜನೆ ಹಾಗೂ ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮಗಳಿಗಾಗಿ ಬಿಡುಗಡೆ ಮಾಡಿರುವ ಅನುದಾನವನ್ನು ತಾಲ್ಲೂಕುವಾರು ಹಣ ಬಿಡುಗಡೆ ಮಾಡುವುದು ಹಾಗೂ ಸದರಿ ಹಣ ಬಿಡುಗಡೆಯನ್ನು ಸಂಬಂಧಪಟ್ಟ ಜಿಲ್ಲಾ ಖಜಾನೆಗೆ ಎನ್.ಎಂ.ಸಿ ಗೆ ಅಪ್‌ಲೋಡ್ ಮಾಡುವುದು.

(ಆ) ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು, ಅವರಿಗೆ ನೀಡಿರುವ ಇ-ಪಾಸ್ ಲಾಗಿನ್ ಮೂಲಕ ಲಾಗಿನ್ ಆಗಿ, ಜನರಲ್ ಸರ್ವೀಸ್ ನಲ್ಲಿ ನೀಡಲಾಗಿರುವ ಮಂಜೂರಾತಿ ಆದೇಶದ ಮುದ್ರಣವನ್ನು ಕ್ಲಿಕ್ ಮಾಡಿಕೊಂಡು ಅದರಲ್ಲಿ ಪ್ರತ್ಯೇಕವಾಗಿ, ಊಟ ಮತ್ತು ವಸತಿ ಸಹಾಯ ಯೋಜನೆ ಹಾಗೂ ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಮಾಹಿತಿಗಳನ್ನು ಮುದ್ರಿಸಿಕೊಳ್ಳುವಂತೆ ಸೂಚಿಸಲಾಗಿದೆ.

1. ಮಂಜೂರಾತಿ ಆದೇಶ (Sanction order proceedings)
2. ಅನುಬಂಧ-1 (Annexure-I, College-wise Sanctioned List- to be attached to DC bill)
3. ಅನುಬಂಧ-1(ಎ) (Annexure-1(a) College-wise, students sanctioned list- to be sent to colleges & not to attach to DC Bill)
4. ಅನುಬಂಧ-ಎ (Annexure-A, to be attached to DC Bill, i.e., for issue of cheques in favour of Banks - Bank-wise sanctioned list)
5. ಅನುಬಂಧ-ಎ(2) (Annexure-A,(2) - to be given to banks Hard and soft copy along with the treasury cheques - Bank-wise students sanctioned list consisting of Aadhaar Numbers (for APB dists) and Bank IFSC codes, Bank account numbers of students etc.,)
6. ಎಂಸಿಇ-4 (MCE-4, The DC Bill form, to be submitted to treasury along with sanction order, Annexure-I, Annexure-A along with the Treasury Token after obtaining counter signature from the competent authority i.e., DBCWOs')

(ಇ) ಖಜಾನೆಗೆ ಬಿಲ್ಲನ್ನು ಸಲ್ಲಿಸಿದ ಕೂಡಲೇ ಖಜಾನೆಯ ಅಧಿಕಾರಿಗಳಿಂದ ಟಿ.ಬಿ.ಆರ್ (Treasury Book Register) ಸಂಖ್ಯೆಯನ್ನು ಪಡೆದುಕೊಳ್ಳುವುದು. ಚೆಕ್ಕನ್ನು ಪಡೆದ ಕೂಡಲೇ ಚೆಕ್ ನಂಬರು ಮತ್ತು ದಿನಾಂಕಗಳನ್ನು ಪ್ರತ್ಯೇಕವಾಗಿ ನಮೂದಿಸಿಡಬೇಕು. ನಂತರದಲ್ಲಿ ಟಿ.ಬಿ.ಆರ್ ನಂಬರ್ ಮತ್ತು ಚೆಕ್ ನಂಬರ್ ದಿನಾಂಕಗಳನ್ನು ಇ-ಪಾಸ್ ಪೋರ್ಟರ್‌ನಲ್ಲಿ ನೀಡಲಾಗುವ ನಮೂನೆಯಲ್ಲಿ ಹಾಗೂ ಕಛೇರಿಯ ವಹಿಯೊಂದರಲ್ಲಿ ನಮೂದುಗಳನ್ನು ಮಾಡಿ ನಿರ್ವಹಣೆ ಮಾಡುವುದು.

ನಿಮ್ಮ ವಿಶ್ವಾಸಿ

12/2/14

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

ಪ್ರತಿಯನ್ನು:

1. ಸರ್ಕಾರದ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು,
2. ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಜಂಟಿ ನಿರ್ದೇಶಕರು (ವಸತಿ ನಿಲಯ), ಹಿಂದುಳಿದ ವರ್ಗಗಳ ಆಯುಕ್ತಾಲಯ, ಬೆಂಗಳೂರು.
4. ಜಂಟಿ ನಿರ್ದೇಶಕರು (ಅಲೆಮಾರಿ ಕೋಶ) (ಪ್ರಭಾರ), ಹಿಂದುಳಿದ ವರ್ಗಗಳ ಆಯುಕ್ತಾಲಯ, ಬೆಂಗಳೂರು.
5. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
6. ರಾಜ್ಯದ ಎಲ್ಲಾ ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು.